XVI ಕಾವೇರಿ ನದಿ ನೀರನ್ನು ತಮಿಳ್ನಾಡಿಗೆ ಬಿಡುವ ಬಗ್ಗೆ

ಶ್ರೀ ಕೆ. ಕೆಂಪೇಗೌಡ.— ತಮಿಳುನಾಡು ಸರಕಾರದವರು ಕಾವೇರಿ ನದಿ ನೀರನ್ನು ಕೊಡಲು ಕೇಳಿರುವ ಬಗ್ಗೆ ಇತ್ತೀಚಿನ ಬೆಳವಣಿಗೆಯ ಬಗ್ಗೆ ಹಾಗೂ ಹಿಂದು ಪತ್ರಿಕೆಯಲ್ಲಿ ವರದಿಯಾಗಿರುವ ಬಗ್ಗೆ ೩೩೪ರ ನಿಯಮಾವಳಿಯಡಿ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಕೆಂಪೇಗೌಡರು ೩೩೪ರ ನಿಯಮಾವಳಿಯಡಿ ಏನು ತಮಿಳುನಾಡು ನೀರಾವರಿ ಸಚಿವರಾದ ಶ್ರೀಮಾನ್ ಯಂಬಾಸುಪ್ರಮಣಿಯರವರು ನಿನ್ನೆ ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ನನ್ನನ್ನು ಭೇಟಿ ಮಾಡಿ ಅಲ್ಲಿ ಈಗ ಇರತಕ್ಕ ಬೆಳೆಗೆ ನೀರು ಕೊಡಬೇಕೆಂದು ಕೇಳಿದರು. ಈ ವಿಷಯದ ಬಗ್ಗೆ ಸರ್ಕಾರ ಈಗಾಗಲೇ ನಾವು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದ್ದು ಅದನ್ನು ಈ ಸದನದಲ್ಲೇ ಹೇಳಿದ್ದೇವೆ ೧೫ ಟಿ. ಎಂ. ಸಿ. ನೀರನ್ನು ಇಲ್ಲಿಯವರೆಗೆ ನಮಗೆ ಎಷ್ಟೇ ಕಷ್ಟ ಇದ್ದರೂ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. —ಆದರೆ ಇವತ್ತು ನಮ್ಮಲ್ಲಿ ಇರುವಂತಹ ಸಮಸ್ಯೆಯ ಪೂರ್ಣ ಪರಿಚಯವನ್ನು ಅವರಿಗೆ ಮಾಡಿಕೊಟ್ಟಿದ್ದೇವೆ ಇರತಕ್ಕಂತಹ ನೀರಿನಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಬೇಕಾಗಿದೆ. ನಂತರ ಮೈಸೂರು ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಹಾಗೂ ಹಾಸನ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗಿದೆ. ಈ ಎಲ್ಲಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ನಮ್ಮಲ್ಲಿ ಏನು ತೊಂದರೆ ಇದೆ ಎಂಬುದನ್ನು ಅವರಲ್ಲಿ ನಿವೇದನೆ ಮಾಡಿಕೊಂಡಿದ್ದೇವೆ.

ಈಗ ನಮ್ಮ ಬಿ.ಜಿ.ಎಂ.ಎಲ್. ಫ್ಯಾಕ್ಟರಿ ಏನಿದೆ ಅದಕ್ಕೆ ಪವರ್ ಜನರೇಷನ್ ಮಾಡದೆ ಹೋದರೆ ೧೫-೧೬ ಸಾವಿರ ಜನ ಲೇಬರರ್ಸ್ ಬೀದಿ ಪಾಲಾಗಂತ್ತಾರೆ. ಇದು ಒಂದು ಸಮಸ್ಯೆಯಾದರೆ ಇನ್ನೊಂದು ನಮ್ಮ ಬೆಲೆಯನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ನಮ್ಮ ಭಾವನೆಗೆ ವಿರುದ್ಧವಾಗಿ ಕೇಂದ್ರ ಸರ್ಕಾರಕ್ಕೆ ವರದಿ ಹೋಗಿದೆ ಎಂದು ಕೇಳಿದ್ದೇನೆ. ನಮ್ಮಲ್ಲಿ ೪೦ ಟಿ.ಎಂ ಸಿ. ನೀರನ್ನು ಹಿಡಿದಿಟ್ಟಿದ್ದಾರೆ, ಅದರಿಂದ ತಮಿಳ್ನಾಡಿಗೆ ತೊಂದರೆಯಾಗಿದೆ ಎಂದು ತಪ್ಪು ಅಭಿಪ್ರಾಯ ಬರುವ ರೀತಿಯಲ್ಲಿ ಕೇಂದ್ರಕ್ಕೆ ಯಾರೋ ವರದಿ ಕೊಟ್ಟಿದ್ದಾರೆ. ನಮಗೆ ಇರತಕ್ಕ ಪರಿಸ್ಥಿತಿಯನ್ನು ಚರ್ಚೆಯಲ್ಲಿ ಸಂಪೂರ್ಣವಾಗಿ ವಿಶ್ಲೇಷಣೆ ಮಾಡಿದ್ದೇವೆ. ಪ್ರಧಾನ ಮಂತ್ರಿಗಳ ಕಡೆಯಿಂದ ನಮಗೆ ಸಾಧ್ಯವಾದಷ್ಟು ಮಟ್ಟಿಗೆ ತಮಿಳ್ನಾಡಿಗೆ ಸಹಾಯ ಮಾಡಬೇಕೆಂದು ಸೂಚನೆ ಕೂಡ ಬಂದಿದೆ. ಕೇಂದ್ರದ ನೀರಾವರಿ ಮಂತ್ರಿಗಳು ಕೂಡ ತಮಿಳ್ನಾಡಿಗೆ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ನಿನ್ನೆ ಎರಡು ಬಾರಿ ಮುಖ್ಯ ಕಾರ್ಯದರ್ಶಿಯವರಿಗೆ ತಗಾದೆ ಮಾಡಿ ಏನು ನಿರ್ಣಯ ಆಯಿತು ಎಂದು ವಿಷಯ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮಗೂ ಅವರಿಗೂ ಯಾವ ಒಂದು ರೀತಿಯ ಸೌಹಾರ್ದ ವಾತಾವರಣ ಇದೆ ಅದನ್ನು ಕಳೆದುಕೊಳ್ಳುವುದಕ್ಕೆ ನಾವು ಸಿದ್ಧವಿಲ್ಲ. ಉಭಯ ರಾಜ್ಯಗಳು ಸೇರಿ ಇಲ್ಲಿಯವರೆಗೆ ಸೌಹಾರ್ದ ವಾತಾವರಣದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿಕೊಂಡು ಬಂದಿದ್ದೇವೆ ಆ ದಿಕ್ಕಿನಲ್ಲಿ ಮುಂದುವರಿಯಬೇಕೆಂಬ ಸದ್ಭಾವನೆಯನ್ನು ನಾವೂ ಕೂಡಾ ಹೊಂದಿದ್ದೇವೆ. ಏನೇ ಕಷ್ಟ ಬಂದರೂ ಅದನ್ನು ಪೇರು ಮಾಡಿಕೊಳ್ಳಬೇಕಾಗುತ್ತದೆ. ಲಾಭ-ನಷ್ಟ, ಕಷ್ಟ-ಸುಖ ಎರಡರಲ್ಲೂ ಅವರ ಜೊತೆ ಭಾಗಿಗಳಾಗಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಸರ್ಕಾರಕ್ಕೆ ತೊಂದರೆಯಾಗುತ್ತದೆಂದಾಗಲೀ ಅಥವಾ ಬರಗಾಲ ಪರಿಸ್ಥಿತಿ ಇದೆ ಎಂದಾಗಲಿ ಅಥವಾ ನಮ್ಮ ರೈತರಿಗೆ ತೊಂದರೆ ಆಗುತ್ತದೆಂಬ ಭಾವನೆಯಿಂದಾಗಲಿ ಪ್ರಧಾನ ಮಂತ್ರಿಗಳು ಮತ್ತು ನೀರಾವರಿ ಸಚಿವರು ನೀಡಿರುವ ಸೂಚನೆಯನ್ನು ತಿರಸ್ಕರಿಸುವ ಇಚ್ಛೆ ನಮ್ಮ ಸರ್ಕಾರಕ್ಕೆ ಇಲ್ಲ ನಮ್ಮಲ್ಲಿರತಕ್ಕ ಇಂಥ ಭೀಕರ ಬರಗಾಲ ಪರಿಸ್ಥಿತಿಯಲ್ಲೂ ಕೂಡ ಕೇಂದ್ರದ ಸೂಚನೆಯನ್ನು ಮಾನ್ಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ನಮ್ಮ ರೈತರೂ ಕೂಡ ಈ ಒಂದು ಕಷ್ಟವನ್ನು ಅರ್ಥ ಮಾಡಿಕೊಳ್ಳುತ್ತಾರೆಂದು ನಾನು ಭಾವಿಸಿರುತ್ತೇನೆ. ಇದರಿಂದ ತಮಿಳ್ನಾಡಿಗಾಗಲಿ ಅಥವಾ ನಮಗಾಗಲೀ ತೃಪ್ತಿಯಾಗುವುದಿಲ್ಲವಾದರೂ ಕಷ್ಟ ಕಾಲದಲ್ಲಲ್ಲೂ ಭಾಗಿಗಳಾಗಬೇಕೆಂದು ಏನು ಹೇಳಿದ್ದೇವೆ ಆ ಒಂದು ಸೌಹಾರ್ದತೆಯಿಂದ, ಆ ಒಂದು ಸದ್ಭಾವನೆಯಿಂದ ಮುಂದುವರಿಯಬೇಕೆಂಬ ಇಚ್ಛೆಯಿಂದ ಈ ಮಾತು ಹೇಳುತ್ತೇನೆ. ಕೇಂದ್ರ ಸರ್ಕಾರದ ಸೂಚನೆಯನ್ನು ಪೂರ್ಣವಾಗಿ ನಿರಾಕರಿಸುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಆ ಬಗ್ಗೆ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿ ಒಂದು ನಿರ್ಣಯ ಮಾಡಬೇಕಾಗಿ ಬರಬಹುದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ನಂಜಪ್ಪ.— ನಮಗೆ ಕುಡಿಯುವುದಕ್ಕೆ ನೀರಿಲ್ಲ ಅನ್ನುತ್ತಿರುವಾಗ ಅವರಿಗೆ ಭತ್ತ ಬೆಳೆಯುವುದಕ್ಕೆ ನೀರು ಕೊಡುತ್ತೇವೆಂದರೆ ಹೇಗೆ?

ಉಪಾಧ್ಯಕ್ಷರು.— ಅದರ ಬಗ್ಗೆ ಈಗ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಹಾಗೆ ಬೇಕಾದರೆ ಬೇರೆ ರೀತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಳ್ಳಿ. ರೂಲ್ ೩೩ರಲ್ಲಿ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶಾಸನ ರಚನಾ ಕಾರ್ಯರೂಪಗಳು

೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ನಗರಾಭಿವೃದ್ಧಿ ಸಚಿವರು).— ಮಾನ್ಯ ಉಪಾಧ್ಯಕ್ಷರೆ, "೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಉಪಾಧ್ಯಕ್ಷರು.— ಪ್ರಸ್ತಾವ ಏನೆಂದರೆ, ೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮಂತ್ರಿ ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಉಪಾಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ *

ಕರ್ನಾಟಕ ಜಿಲ್ಲಾ ಪರಿಷತ್ ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ್ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ (ತಿದ್ದುಪಡಿ) ವಿಧೇಯಕ ೧೯೮೬

ಪರ್ಯಾಲೋಚನಪ್ರಸ್ತಾಪ (ಮುಂದುವರಿದ ಚರ್ಚೆ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಗುರುಮಿಠಕಲ್).— ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಈ ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡಾಗ ನಾನು ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದೆ. ಆಗ ಮಾನ್ಯ ಮಂತ್ರಿಗಳಾದ ನಜೀರ್‌ಸಾಬ್‌ರವರು ತಾವು ಹೇಳತಕ್ಕ ವಾದ ಸರಿ ಎಂಬ ರೀತಿಯಲ್ಲಿ ತಮ್ಮ ವಾದವನ್ನು ಸದನದ ಮುಂದಿಟ್ಟರು. ಕೊನೆಗೆ ಈ ತಿದ್ದುಪಡಿ ಮಸೂದೆ ಪುನಃ ಇವತ್ತು ನಮ್ಮ ಮುಂದೆ ವಿಚಾರಣೆಗೆ ಬಂದಿದೆ. ಮುಖ್ಯವಾಗಿ ಈ ಜಿಲ್ಲಾ ಪರಿಷತ್ತು ಮಸೂದೆ ಏನಿದೆ ಇದಕ್ಕೆ ನನ್ನ ವೈಯಕ್ತಿಕ ವಿರೋಧ ಇಲ್ಲ. ಇದು ಒಳ್ಳೆಯ ಕಾನೂನು, ಪ್ರಗತಿಪರವಾದ ಕಾನೂನು. ಇದು ಇರಲೇಬೇಕೆಂಬುವವನು ನಾನು. ಆದರೆ ಇಂದಿನ ಸಂದರ್ಭ, ವಾತಾವರಣ ಅಷ್ಟು ಚೆನ್ನಾಗಿಲ್ಲವೆಂಬುದೇ ನನ್ನ ವಾದ.

ಶ್ರೀ ಹೆಚ್. ಡಿ. ದೇವೇಗೌಡ.— ಚುನಾವಣೆ ಮಾಡಿ ಎಂದು ಹೇಳುತ್ತೀರಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ವೈಯಕ್ತಿಕವಾಗಿ ಹೇಳಿದೆ. ಇದಕ್ಕೆ ಕಾರಣ ಏನೆಂದರೆ ನಾನು ಒಂದಿನಿಂದ ಇದನ್ನು ಹೇಳಿಕೊಂಡು ಬಂದಿದ್ದೇನೆ. ಹೋದ ಸಾರಿಯೂ ಈ ಸದನದಲ್ಲಿ ಹೇಳಿದ್ದೇನೆ. ಅನೇಕ ಅಧಿಕಾರಿಗಳನ್ನು ನಾವು ಹಳ್ಳಿಯಲ್ಲಿರತಕ್ಕ ಜನತೆಗೆ ಕೊಡಬೇಕೆಂಬುದೇ ನಮ್ಮ

* Annexure

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.